**‘ನನ್ನ ಶವಸಂಸ್ಕಾರ ಮಾಡಲು ಬೇಕಾದಷ್ಟು ಹಣ ನಿನ್ನ ಬಳಿ ಇದೆಯೆ?’ ನಾನು ಇಂಥ ಮಾತಿಗೆ ವಿರೋಧ ಸೂಚಿಸಿ ಅಳತೊಡಗಿದೆ. ಸಾವಿನ ಹೊಸ್ತಿಲಲ್ಲಿ ನಿಂತಿರುವುದು ಅವರಿಗೂ ಗೊತ್ತಾಗಿತ್ತು. ಅವರ ಬೌದ್ಧಿಕ ಸಾಹಸಗಳು ಶರೀರದ ಅಸ್ವಸ್ಥತೆ ಎದುರು ಮಂಡಿಯೂರಿದ್ದವು.**

ಏನೇನೊ ಮಾತಾಡಿ ಗೊಂದಲಗೊಳ್ಳುತ್ತಿದ್ದರು. ಆರಲೆಟ್ಟೆಯ ಕಡೆ ನೋಡುತ್ತ ಹೇಳಿದರು, ‘ಪ್ರಿಯ ಆರಲೆಟ್ಟೆ, ನೀನು ಮರಣ ಹೊಂದಿರುವೆಯಲ್ಲವೆ? ಹಾಗಾದರೆ ಹೇಳು, ಶವಸಂಸ್ಕಾರದ ವಿಧಿವಿಧಾನಗಳು ಹೇಗಿರುತ್ತವೆ? ಈಗ ನಾವಿಬ್ಬರೂ ಮರಣ ಹೊಂದಿದ್ದೇವೆ’. ನನ್ನ ಕಡೆ ನೋಡಿ ಮಾತಾಡತೊಡಗಿದರು: ‘ನಾನು ಪ್ಯಾರಿಸ್ಸಿನಲ್ಲಿ ನನ್ನ ಸೆಕ್ರೆಟರಿಯ ಜೊತೆ ಊಟಮಾಡಿದೆ.’ ನನಗೆ ಅಚ್ಚರಿ. ಅಂಥ ಯಾವ ಸೆಕ್ರೆಟರಿಯೂ ಇರಲಿಲ್ಲ. ನಾನು ಸಿಟ್ಟಿನಿಂದ ನೋಡಿದೆ. ಅವರು ಮಾತು ಬದಲಾಯಿಸಿದರು: ‘ವೈದ್ಯರು ತುಂಬಾ ದಯಾಳು ವ್ಯಕ್ತಿ. ತಮ್ಮ ಗಾಡಿಯಲ್ಲಿ ನನ್ನನ್ನು ಮನೆಗೆ ತಲುಪಿಸಿದರು. ದಾರಿಯಲ್ಲಿ ಯಾವ್ಯಾವುದೊ ರಸ್ತೆ ದಾಟಿಕೊಂಡು, ಉಪನಗರಗಳನ್ನು ನೋಡುತ್ತ ಬಂದೆವು.’ ನಾನು ಹೇಳಿದೆ, ‘ನೀವು ಯಾವುದೊ ಕನಸು ಕಂಡಿರಬೇಕು’. ಅವರು ಆಸ್ಪತ್ರೆಯಲ್ಲಿದ್ದ ಶಿಲುಬೆ ಕಡೆ ನೋಡಿ ಹೇಳಿದರು, ‘ಇಲ್ಲ, ಹಾಗೇನಿಲ್ಲ’. ನಾನು ಮಾತು ಬೆಳೆಸಲು ಹೋಗಲಿಲ್ಲ.

ತೀವ್ರವಾದ ಜ್ವರ ಬಹಳ ದಿನಗಳವರೆಗಿತ್ತು. ಇಂಥ ವಿಪರೀತ ಜ್ವರದಿಂದಾಗಿ ಬುದ್ಧಿಭ್ರಮಣೆಗೊಳಪಡುತ್ತಿದ್ದರು. ಶ್ವಾಸಕೋಶದ ತೊಂದರೆ ಕೊಂಚಮಟ್ಟಿಗೆ ನಿವಾರಣೆಯಾಗಿತ್ತು. ಆಸ್ಪತ್ರೆಯಲ್ಲಿ ಅವರೊಂದಿಗೆ ಕೇವಲ ಒಬ್ಬರಿಗೆ ಮಾತ್ರ ಇರಲು ಅವಕಾಶವಿತ್ತು. ಬೆಳಗ್ಗೆ ಆರಲೆಟ್ಟೆ ಇದ್ದರೆ ಸಂಜೆ ನಾನಿರುತ್ತಿದ್ದೆ. ಪ್ರತಿ ದಿನ ಬೆಳಗ್ಗೆ ಫೋನ್ ಮಾಡಿ, ‘ರಾತ್ರಿ ಚೆನ್ನಾಗಿ ನಿದ್ದೆ ಮಾಡಿದಿರಾ?’ ಎಂದು ಕೇಳುತ್ತಿದ್ದೆ. ಅವರ ಪ್ರತಿದಿನದ ಉತ್ತರ ಒಂದೇ ತೆರನಾಗಿತ್ತು: ‘ತುಂಬಾ ಒಳ್ಳೆಯ ರಾತ್ರಿ.’ ಸಂಜೆಯ ಮಾತುಕತೆಯಲ್ಲಿ ತುಂಬಾ ಲವಲವಿಕೆಯಿಂದ ಇರುತ್ತಿದ್ದರು. ಸಂಜೆ ಕೆಲ ಹೊತ್ತು ಕುರ್ಚಿ ಮೇಲೆ ಅವರನ್ನು ಕೂಡಿಸಲಾಗುತ್ತಿತ್ತು. ಉಳಿದಂತೆ ಹಾಸಿಗೆಯಲ್ಲೆ ಬಹುಹೊತ್ತು ಕಳೆಯುವುದು ಅನಿವಾರ್ಯವಾಗಿತ್ತು. ತುಂಬಾ ದುರ್ಬಲರಾಗಿದ್ದರು. ನಿಶ್ಶಕ್ತಿ ಅವರನ್ನು ಮೆತ್ತಗಾಗಿಸಿತ್ತು. ಉತ್ಸಾಹದಲ್ಲಿದ್ದಂತೆ ತೋರಿಸಿಕೊಳ್ಳಲು ಹಾತೊರೆಯುತ್ತಿದ್ದರು. ಆಸ್ಪತ್ರೆಯಿಂದ ಯಾವಾಗ ಬಿಡುಗಡೆ ಅನ್ನುವುದೇ ಅವರು ಮೇಲಿಂದ ಮೇಲೆ ಕೇಳುತ್ತಿದ್ದ ಪ್ರಶ್ನೆ.

ಈ ಕುರಿತು ವೈದ್ಯರನ್ನು ಕೇಳಿದೆ. ‘ಈಗಲೇ ಏನೂ ಹೇಳಲಿಕ್ಕಾಗುವುದಿಲ್ಲ’ – ಅವರ ಉತ್ತರ ಸಿದ್ಧವಾಗಿರುತಿತ್ತು. ಎರಡು ದಿನಗಳ ತರುವಾಯ ಅವರನ್ನು ಮತ್ತೆ ತೀವ್ರ ನಿಗಾ ಘಟಕದಲ್ಲಿಡಲು ಯೋಚಿಸಿದರು. ಇದರ ಉದ್ದೇಶ ಯಾವುದೇ ಅಪಾಯಗಳನ್ನು ತಡೆಯುವುದಾಗಿದೆಯೆಂದು ತಿಳಿಸಿದರು. ಸಾರ್ತ್ರ್‌ಗೆ ಇಷ್ಟವಿಲ್ಲದ ಸ್ಥಳವದು. ಅಲ್ಲಿ ಮಾನಸಿಕವಾಗಿ ಕುಗ್ಗಿಹೋಗುತ್ತಿದ್ದರು. ಸಿಲ್ವಿಯಾ ಬಂದಾಗ ಬೇಸರ ತೋಡಿಕೊಂಡರು. ಬೇರಾವುದಾದರೂ ದ್ವೀಪಕ್ಕೆ ಕರೆದುಕೊಂಡು ಹೋಗುವಂತೆ ಕೇಳುತ್ತಿದ್ದರು. ಈಗ ಬೊಲಾಯಿಲ್‌ಗೆ ಹೋಗುವ ಸಾಧ್ಯತೆಯಂತೂ ಇರಲೇ ಇಲ್ಲ. ಅಲ್ಲಿ ಕಾಯ್ದಿರಿಸಿದ್ದ ಕೋಣೆಗಳನ್ನೆಲ್ಲ ರದ್ದು ಮಾಡಬೇಕಾಯಿತು. ವೈದ್ಯರು ಅವರ ಪರೀಕ್ಷೆಗಳನ್ನು ಹೆಚ್ಚಿಸಿದರು. ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸತೊಡಗಿತು. ಅವರ ಮೂತ್ರಕೋಶಕ್ಕೂ ಸೋಂಕು